ಪುಟದಲ್ಲಿ ಮುಗಿದು ಹೋಯ್ತು ಅನ್ನುವಂತೆ ಹಾಳೆ ಮಗುಚಿದ್ದಳು. ಯಾಕೆ ಈ ಹಟ? ಯಾಕೆ ಈ ಬಲವಂತದ ಮಾಘಸ್ನಾನ? ಮರುಮದುವೆಯಾಗಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕಲು ಅಮಾಯಕಳಿಗೆ ಮೋಸ ಮಾಡಿದ ಆ ಮನುಷ್ಯನ ಮುಖವನ್ನು ಮತ್ತೆ ಜನ್ಮೇಪಿ ನೋಡಬಾರದೆಂಬ ಹಟವೊಂದೇ ಕಾರಣವಾಗಿರಲಿಲ್ಲ. ತನಗೆ ಮಾಡಿದ ದ್ರೋಹವನ್ನು ಆ ಮನೆಯವರು ಮತ್ತೊಬ್ಬರಿಗೆ ಮಾಡಬಾರದೆಂಬ ಹಟವೂ. ಸಿಕ್ಕಿದಲ್ಲಿ ಮೆಂದುಕೊಂಡು ಇರಲಿ ಹಾಗೇ. ಅಲ್ಲದೆ ವಿಚ್ಛೇದನ ಅಂದರೆ ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾದ್ದು ತಾನು. ಈ ಪ್ರಕ್ರಿಯೆಗೆ ಬೇಕಾದ ಮಾನಸಿಕ ಸಿದ್ಧತೆಯಾಗಲೀ, ಸ್ಥಿಮಿತತೆಯಾಗಲೀ, ಪುರುಸೊತ್ತಾಗಲೀ ರಾಧನಿಗಿರಲಿಲ್ಲ. ತಮ್ಮನನ್ನು ಈ ಕೆಸರಿಗೆಳೆದು ನೆಮ್ಮದಿ ಕೆಡಿಸಲು ರಾಧ ಮನಸ್ಸುಮಾಡಲಿಲ್ಲ. ಆ ಕಾಲದ ಅನಿವಾರ್ಯವೇನಾಗಿರದ 'ಬಿಡುಗಡೆ' ಕಾನೂನುರೀತ್ಯಾ ರಾಧನಿಗೆ ಸಿಗಲಿಲ್ಲವಾದರೂ ಮಾನಸಿಕವಾಗಿ ಬಿಡುಗಡೆಗೊಂಡು ಯಾವುದೋ ಕಾಲ ಆಗಿ ಹೋಗಿತ್ತು.

ತನ್ನ ಓದಿಗೆ ತಕ್ಕ ಉದ್ಯೋಗವನ್ನು ಸಂಪಾದಿಸಿಕೊಂಡಳು ರಾಧ. ಅನುದಾನಿತ ಖಾಸಗಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿ. ಬೆಂಗಳೂರು ರಾಧೆಗೆ ಅನ್ನ ಕೊಟ್ಟಿತು, ಆಶ್ರಯ ಕೊಟ್ಟಿತು. ಸುಲಭವಾಗಿ ಅಲ್ಲಿಗೆ ಹೊಂದಿಕೊಂಡಳು ರಾಧ. ಹೀಗೆ ಕಣ್ಣು ಕಾಣದ ದೂರದ ಊರಿನಲ್ಲಿ ನೆಲೆ ಕಂಡುಕೊಳ್ಳಲು ಒಂದು ಸಕಾರಣ ಕೂಡಾ ಇತ್ತು. ಹುಟ್ಟೂರಿನಿಂದ ತಾನು ದೂರ ಇದ್ದಷ್ಟೂ ಒಳಿತು ಎನ್ನುವುದು ಅವಳ ಅಂತರ್ಯದಲ್ಲಿ ಗುಪ್ತವಾಗಿದ್ದ ಭಾವನೆ. ತಮ್ಮನ ಸಂಸಾರದಲ್ಲಿ ತಾನು ಮೂಗು ತೂರಿಸಬಾರದೆಂಬ ವಿವೇಚನೆ. ಆದರೆ ವಿಧಿ ಅವಳ ಪಾಲಿಗೆ ತೀರಾ ನಿಷ್ಕರುಣಿಯಾಗಿರಲಿಲ್ಲ. ತಮ್ಮನನ್ನು ಮದುವೆಯಾಗಿ ಮನೆ ತುಂಬಿದ ಸುವರ್ಣ ಮನೆ ತಪ್ಪಿದ ಈ ಅತ್ತಿಗೆಯನ್ನು ಹೃದಯಕ್ಕೆ ಹಚ್ಚಿಕೊಂಡಳು. ಗೌರವ ಮತ್ತು ಪ್ರೀತಿಯನ್ನು ಧಾರಾಳವಾಗಿ ಉಣಬಡಿಸಿದಳು. ಇದೆಲ್ಲಾ ತನಗೆ ದೊರಕುವ ಸಂಬಳದ ಪ್ರಭಾವವಿರಬಹುದೇ ಎನ್ನುವ ಸಂಶಯದ ಕೀಟ ತಲೆ ಕೊರೆಯಲು ಆಸ್ಪದ ಕೊಡಲಿಲ್ಲ ರಾಧ. ಹುಡುಕಲು ಹೋದರೆ ಎಲ್ಲರಲ್ಲೂ, ಎಲ್ಲದರಲ್ಲೂ ಹುಳುಕು ಕಾಣಿಸಿಕೊಳ್ಳತೊಡಗುತ್ತದೆ. ತಮ್ಮ ರಾಮಕೃಷ್ಣ ಇವಳಿಂದ ಯಾವ ಸಹಾಯವನ್ನೂ ನಿರೀಕ್ಷಿಸುತ್ತಿರಲಿಲ್ಲ. ಆದರೆ ಅನಿವಾರ್ಯ ಸಂದರ್ಭದಲ್ಲಿ ಇವಳು ತಮ್ಮನ ಕೈ ಬಿಡಲಿಲ್ಲ. ಮೊದಲು ಅಪ್ಪ, ನಂತರ ಅಮ್ಮ ತೀರಿ ಹೋದ ಸಂದರ್ಭದಲ್ಲಿರಲಿ, ತಮ್ಮನ ಮಕ್ಕಳ ಓದಿಗೆ ಸಹಾಯ ಮಾಡುವುದಿರಲಿ, ತವರುಮನೆಯವರ ಅನುವು ಆಪತ್ತಿಗಿರಲಿ, ರಾಧ ಧಾರಾಳವಾಗಿ ಸಹಾಯಹಸ್ತ ಚಾಚುತ್ತಿದ್ದಳು. ಕಾಲೇಜಿಗೆ ರಜಾ ಸಿಕ್ಕಿದಾಗ ಊರಿಗೆ ಹಾರಿ ಬರುತ್ತಿದ್ದ ರಾಧನಿಗೆ ತಮ್ಮನ ಇಬ್ಬರು ಮಕ್ಕಳು ಆಕರ್ಷಣೆಯ ಕೇಂದ್ರ. ಅವರನ್ನು ಎತ್ತಿ ಆಡಿಸಿ ಮುದ್ದಾಡುವುದರಲ್ಲಿ ತಾಯ್ತನದ ಸುಖ ಅನುಭವಿಸಿದಳು ರಾಧ. 'ಲಾಲಿಸಿದರೆ ಮಕ್ಕಳು, ಪೂಜಿಸಿದರೆ ದೇವರು' ಅನ್ನುವಂತೆ ತಮ್ಮನ್ನು ಪ್ರೀತಿಸುವ ರಾಧತ್ತೆ ಮಕ್ಕಳಿಗೂ ಪ್ರಿಯವಾದಳು. ಮುಂದೆ ಕೇಶವನಿಗೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಸಿಕ್ಕಿದಾಗ ಅವನ ಖರ್ಚುವೆಚ್ಚಗಳನ್ನು ಸ್ವಸಂತೋಷದಿಂದ ವಹಿಸಿಕೊಂಡು ಅವನನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಓದಿಸಿದಳು ರಾಧ. 'ನನ್ನ ಹೊಟ್ಟೇಲಿ ಹುಟ್ಟದಿದ್ರೂ ಇವರು ನನ್ನ ಮಕ್ಕಳೇ...' ಎನ್ನುವುದು ಅವಳ ಅಂತರ್ಯದ ಭಾವನೆ.

ತೀರಾ ದುಬಾರಿಯಾಗಿರದ ಕಾಲದಲ್ಲಿ ಬೆಂಗಳೂರಿನಲ್ಲಿ ಒಂದು ಸೈಟು ಖರೀದಿಸಿದ್ದಳು ರಾಧ, ಕಾಲೇಜಿಗೆ ಹತ್ತಿರವಾಗುವ ಸ್ಥಳದಲ್ಲಿ. ಮುಂದೆ ಒಂದು ದಿನ ಅವಳ ಸ್ವಂತ ಮನೆ ಸಿದ್ಧವಾಗಿ, ಗೃಹಪ್ರವೇಶ ನಡೆದು, ಬೇಕಾದ ಅನುಕೂಲತೆಗಳನ್ನೆಲ್ಲಾ ಅಳವಡಿಸಿಕೊಂಡಿದ್ದಾಗಿತ್ತು. ಕೈ ತುಂಬಾ ಸಂಬಳ, ಸ್ವಂತ ಮನೆ, ಪ್ರೀತಿ ಹಂಚಲು ತಮ್ಮನ ಮಕ್ಕಳು. ಕಾಲ ಸರಿಯಿತು. ಕೇಶವನ ಓದು ಮುಗಿದು, ಕ್ಯಾಂಪಸ್ ಸೆಲೆಕ್ಷನ್ ಆಗಿ, ಮುಂದೆ ಅವನ ಮದುವೆಯಾಗುವವರೆಗೆ ಅವನು ರಾಧತ್ತೆಗೆ